# ಡಿವಿಜಿಯವರನ್ನು ನೆನೆಯುತ್ತಾ..

**ಡಿವಿಜಿಯ ಹೆಸರಿನಲ್ಲಿ ಒಂದು ಪ್ರಶಸ್ತಿ ಸ್ಥಾಪಿಸಬೇಕೆಂಬ ವಿಚಾರವನ್ನು ಬಳಗದ ಸ್ನೇಹಿತರೊಡನೆ ಹಂಚಿಕೊಂಡಾಗ ಅವರೆಲ್ಲಾ ಸಂತೋಷದಿಂದ ಬೆಂಬಲಿಸಿದರು. ಚೊಚ್ಚಲ ಡಿವಿಜಿ ಪ್ರಶಸ್ತಿಯನ್ನು ಯಾರಿಗೆ ಕೊಡಬೇಕೆಂಬ ಜಿಜ್ಞಾಸೆಯಿಂದ ನಾವೆಲ್ಲಾ ಸಭೆ ಸೇರಿದಾಗ ನಮ್ಮೆಲ್ಲರ ಆಯ್ಕೆ ಮಹಾಮಹೋಪಾಧ್ಯಾಯ ವಿದ್ವಾನ್ ನಡಹಳ್ಳಿ ರಂಗನಾಥ ಶರ್ಮರು.**

■ ಕನಕರಾಜು



ಮಹಾ ಮಹೋಪಾಧ್ಯಾಯ ವಿದ್ವಾನ್ ರಂಗನಾಥ್ ಶರ್ಮ ಅವರೊಡನೆ ಕನಕರಾಜು

ಸಾಹಿತ್ಯ ಲೋಕದಲ್ಲಿ, ಸಂಗೀತ ಕ್ಷೇತ್ರದಲ್ಲಿ, ಸಿನಿಮಾ, ಲಲಿತಕಲೆಗಳಲ್ಲಿ ಅತ್ಯಂತ ಹೆಸರುವಾಸಿಯಾದವರೊಡನೆ ಕಳೆದ ಕೆಲವೇ ಕ್ಷಣಗಳು ಕೂಡ ಜನಸಾಮಾನ್ಯರಿಗೆ ಅಮೂಲ್ಯವಾದದ್ದೇ. ಸಭೆ ಸಮಾರಂಭಗಳಿಗೋ, ಕಾರ್ಯಕ್ರಮ ಉದ್ಘಾಟನೆಗೋ, ಸಂವಾದ, ಚರ್ಚೆ, ಕವಿಗೋಷ್ಠಿಗಳಂತಹ ಸಂದರ್ಭಗಳಲ್ಲೋ ಇಂಥ ಮಹಾನುಭಾವರು ಒಂದು ಭಾಷಣ ಮಾಡಿ, ಕೈಕುಲುಕಿ, ಪ್ರಶಸ್ತಿಗಳನ್ನು ನೀಡಿ ಧನ್ಯರಾಗುತ್ತಾರೆ. ಅಂಥ ಸಂದರ್ಭವೇ ನಮ್ಮ ಮನಸ್ಸಿನಲ್ಲಿ ಇಷ್ಟಪಡುವ ಖ್ಯಾತನಾಮರನ್ನು ಹತ್ತಿರದಿಂದ ಕಂಡು ಮಾತನಾಡುವ ಅವಕಾಶ ಒದಗಿ ಬರುವುದು.

ಕನ್ನಡ ಸಾರಸ್ವತ ಲೋಕದಲ್ಲಿ ಡಿ.ವಿ. ಗುಂಡಪ್ಪ ಅವರ ಹೆಸರು ಯಾರಿಗೆ ತಾನೇ ಗೊತ್ತಿಲ್ಲ. ಡಿವಿಜಿಯವರ 'ಮಂಕುತಿಮ್ಮನ ಕಗ್ಗ' ಬಹು ಪ್ರಸಿದ್ಧ. ಇಂಥ ಮಹಾನುಭಾವರ ವಿಚಾರಧಾರೆಯಿಂದ ಪ್ರೇರಣೆಗೊಂಡು ಪ್ರಾರಂಭವಾದ ಒಂದು ಸಂಘಟನೆ ಡಿವಿಜಿ ಬಳಗ. 2008ರಲ್ಲಿ ಕುಶಾಲನಗರದ ನಮ್ಮ ಮನೆಯಲ್ಲಿ ಸಣ್ಣದಾಗಿ ಪ್ರಾರಂಭವಾದ ಈ ಸಂಸ್ಥೆ ನಿಧಾನವಾಗಿ ಬೆಳೆಯತೊಡಗಿದೆ. ವೃತ್ತಿಯಿಂದ ಊರಿಂದೂರಿಗೆ ಹೋಗಬೇಕಾದ ಅನಿವಾರ್ಯತೆ ಇರುವುದರಿಂದ ಡಿವಿಜಿ ಬಳಗ ಮೈಸೂರಿಗೂ ಬರುವಂತಾಯಿತು.

ಡಿವಿಜಿಯ ಹೆಸರಿನಲ್ಲಿ ಒಂದು ಪ್ರಶಸ್ತಿ ಸ್ಥಾಪಿಸಬೇಕೆಂಬ ವಿಚಾರವನ್ನು ಬಳಗದ ಸ್ನೇಹಿತರೊಡನೆ ಹಂಚಿಕೊಂಡಾಗ ಅವರೆಲ್ಲಾ ಸಂತೋಷದಿಂದ ಬೆಂಬಲಿಸಿದರು. ಚೊಚ್ಚಲ ಡಿವಿಜಿ ಪ್ರಶಸ್ತಿಯನ್ನು ಯಾರಿಗೆ ಕೊಡಬೇಕೆಂಬ ಜಿಜ್ಞಾಸೆಯಿಂದ ನಾವೆಲ್ಲಾ ಸಭೆ ಸೇರಿದಾಗ ನಮ್ಮೆಲ್ಲರ ಆಯ್ಕೆ ಮಹಾಮಹೋಪಾಧ್ಯಾಯ ವಿದ್ವಾನ್ ನಡಹಳ್ಳಿ ರಂಗನಾಥ ಶರ್ಮರು. ಡಿವಿಜಿಯವರ ನಿಕಟವರ್ತಿಗಳಾದ ಶರ್ಮರ ಬಳಿ ಡಿವಿಜಿಯವರು ಆಗಾಗ ವಿಚಾರ ಮಂಥನ ಮಾಡುತ್ತಿದ್ದರು. ವ್ಯಾಕರಣ ವಿಷಯದಲ್ಲಿ ಏನಾದರೂ ಸಂದೇಹ ಬಂದಾಗ ಡಿವಿಜಿಯವರು ನೆನೆಯುತ್ತಿದ್ದುದು ಶರ್ಮರನ್ನು. ಜೊತೆಗೆ ವಿದ್ವಾನ್ ರಂಗನಾಥ ಶರ್ಮರು ಬರೆದ ಒಂಭತ್ತು ಸಂಪುಟಗಳ ವಾಲ್ಮೀಕಿ ರಾಮಾಯಣಕ್ಕೆ ಮುನ್ನುಡಿ ಡಿವಿಜಿಯವರದ್ದೇ. ಒಂದು ನಮ್ಮ ಮುಂದೆ ಡಿವಿಜಿಯವರ 'ಮರುಳ ಮುನಿಯನ ಕಗ್ಗ' ಇದ್ದರೆ ಅದಕ್ಕೆ ಕಾರಣ ರಂಗನಾಥ ಶರ್ಮರು. ಹರಿದು ಹಂಚಿಹೋಗಿದ್ದ ಈ ಕಗ್ಗವನ್ನು ಒಂದೆಡೆ ಕಲೆ ಹಾಕಿ ಅದರ ಸಂಪಾದನೆ ಮಾಡಿದ್ದು ರಂಗನಾಥ ಶರ್ಮರು. ಮೈಸೂರಿನಲ್ಲಿದ್ದ ಅವರ ಮನೆಗೆ ತೆರಳಿ ಅವರನ್ನು ಈ ಪ್ರಶಸ್ತಿಗೆ ಒಪ್ಪಿಸಿ ಬಿಟ್ಟೆವು.

2013ರ ಮಾರ್ಚ್ 24ರಂದು ಮೈಸೂರಿನ ನಾದಬ್ರಹ್ಮ ಸಂಗೀತಸಭಾದ ಸಭಾಂಗಣದಲ್ಲಿ 98 ವರ್ಷದ ಜ್ಞಾನವೃದ್ಧ ಮಹಾಮಹೋಪಾಧ್ಯಾಯ ವಿದ್ವಾನ್ ರಂಗನಾಥ ಶರ್ಮರನ್ನು ಚೊಚ್ಚಲ ಡಿವಿಜಿ ಪ್ರಶಸ್ತಿ ನೀಡಿ ಸನ್ಮಾನಿಸಿದೆವು. ಖ್ಯಾತ ಸಾಹಿತಿಗಳಾದ ಡಾ. ಟಿ ವಿ ವೆಂಕಟಾಚಲಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಈ ಎರಡು ಮಹಾವಿದ್ವಾಂಸರ ನಡುವೆ ಕುಳಿತುಕೊಳ್ಳುವ ಸೌಭಾಗ್ಯ ನನಗೆ ದೊರೆಯಿತು. ರಂಗನಾಥ ಶರ್ಮರು ಸುಮಾರು 50 ನಿಮಿಷ ಮಾತನಾಡಿದರು. ಸುಮಾರು ಮೂರು ಗಂಟೆ ನಡೆದ ಈ ಕಾರ್ಯಕ್ರಮದಲ್ಲಿ ಅವರೊಡನೆ ನಾನು ಅನೇಕ ಬಾರಿ ಸಂಭಾಷಿಸಿದೆ. ಕಣ್ಣು ಸ್ವಲ್ಪ ಮಂಜಾಗಿದ್ದ ಅವರು ಕಾರ್ಯಕ್ರಮಕ್ಕೆ ಎಷ್ಟು ಮಂದಿ ಪ್ರೇಕ್ಷಕರು ಬಂದಿದ್ದಾರೆ ಎಂದು ಕೇಳಿದರು. ಸಭಾಂಗಣ ತುಂಬಿದ್ದು ಕೇಳಿ ಹರ್ಷಗೊಂಡರು. ಮಗುವಿನಂತಹ ಮನಸ್ಸಿನ ಅವರೊಡನೆ ನಾನು ಕಳೆದ ಆ ಮೂರು ಗಂಟೆಗಳು ನನ್ನ ಬದುಕಿನ ಅವಿಸ್ಮರಣೀಯ ಸಮಯ. ಚೊಚ್ಚಲ ಡಿವಿಜಿ ಪ್ರಶಸ್ತಿ ಪಡೆಯಲು ಜೀವವಿಟ್ಟುಕೊಂಡಂತೆ ಇದ್ದ ಶರ್ಮರು ಕಾರ್ಯಕ್ರಮ ನಡೆದ ಒಂಭತ್ತು ತಿಂಗಳಿನಲ್ಲಿ ಅಂದರೆ ಜನವರಿ 25, 2014ರಂದು ಇಹಲೋಕ ತ್ಯಜಿಸಿದರು.

ಆದರೂ ರಂಗನಾಥ ಶರ್ಮರ ಜೀವನಪ್ರೀತಿ, ಅಗಾಧ ಪಾಂಡಿತ್ಯ ನಮಗೆಲ್ಲರಿಗೂ ದಾರಿದೀಪ. ಅವರ ನೆನಪು ಎಂದೆಂದಿಗೂ ಚಿರನೂತನ. ■